**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 290/2022

ಪಿಡಬ್ಲು :6 ಸಿಡಬ್ಲು :5

ಸಾಕ್ಷಿಯ ಹೆಸರು : ಶ್ರೀ.ಸಿದ್ದಪ್ಪ ಸವದಿ

ತಂದೆಯ ಹೆಸರು : ಶ್ರೀ. ಮುತ್ತಪ್ಪ

ವಯಸ್ಸು : 66 ವರ್ಷ

ಉದ್ಯೋಗ : ವ್ಯವಸಾಯ

ವಾಸ್ತವ್ಯ : ಸುಟ್ಟಟ್ಟಿ ಗ್ರಾಮ, ತಾಲೂಕುಃ ಅಥಣಿ

ದಿನಾಂಕ : 05-12-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 4 ಫ್ರಾಸಾಃ 5 ಮಂಜುನಾಥ ಅಂಬಾಜಿ ನನಗೆ ಗೊತ್ತಿರುತ್ತಾರೆ. ಚಾಸಾಃ 1 ಸುನೀಲ ಶಂಕರ ಗಾಡಿವಡ್ಡರ ನನಗೆ ಗೊತ್ತಿರುತ್ತಾರೆ , ಅವರು ನಮ್ಮ ಊರಿನವರು. ಆರೋಪಿತರು ನನಗೆ ಗೊತ್ತಿರುತ್ತಾರೆ, ಅವರು ನಮ್ಮ ಊರಿನವರು.

2. ಪೋಲಿಸರು ಪಂಚನಾಮೆಗೆ ಬರುವಂತೆ ನನಗೆ ಕರೆದಿರುವುದಿಲ್ಲ. ಈಗ 4 ವರ್ಷಗಳ ಹಿಂದೆ 1 ನೇ ಆರೋಪಿ ಮಾಳಿ ಅವರ ಮನೆಯ ಮುಂದೆ ಹಾಗೂ ಅವರ ತೋಟದಲ್ಲಿರುವ ಬಾವಿಯ ಪಕ್ಕದಲ್ಲಿ ನನ್ನ ಸಹಿ ಮಾಡಿಸಿಕೊಂಡಿರುತ್ತಾರೆ. ಪೋಲಿಸರು ನನಗೆ ಏನೂ ವಿಚಾರ ಹೇಳಿರುವುದಿಲ್ಲ, ನನ್ನ ಸಹಿ ಮಾತ್ರ ಮಾಡಿಸಿಕೊಂಡಿರುತ್ತಾರೆ. ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ.

3. ನಾನು ಸಹಿ ಮಾಡಿದ ಸ್ಥಳದಲ್ಲಿ ಪೋಟೋಗಳನ್ನು ತೆಗೆದಿದ್ದಾರೆ ಎಂದು ಗುರುತಿಸಿದ್ದು ಅದರಲ್ಲಿ ತಮ್ಮ ಇರುವಿಕೆಯನ್ನು, ಮಂಜುನಾಥ ಅಂಬಾಜಿ ಅವರ ಇರುವಿಕೆಯನ್ನು ಮತ್ತು 1 ನೇ ಆರೋಪಿಯ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋಗಳನ್ನು ಈಗಾಗಲೇ ನಿಪಿ-13 ರಿಂದ ನಿಪಿ-19 ಎಂದು ಗುರುತಿಸಲಾಗಿದೆ. ನಿಪಿ-14 ರಲ್ಲಿರುವ ಮೋಟರಸೈಕಲನ್ನು 1 ನೇ ಆರೋಪಿ ಯಾವ ಕಾರಣಕ್ಕೆ ಹಾಜರುಮಾಡಿದರು ಎಂದು ನನಗೆ ಗೊತ್ತಿಲ್ಲ. ನಿಪಿ-18 ರಲ್ಲಿ ಕಾಣುವ ರಾಗೋಲನ್ನು 1 ನೇ ಆರೋಪಿ ಯಾವ ಕಾರಣಕ್ಕೆ ನೀಡಿದರು ಎನ್ನುವುದು ನನಗೆ ಗೊತ್ತಿಲ್ಲ.

4. ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ-12 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-12 [ಬಿ] ಎಂದು ಗುರುತಿಸಲಾಯಿತು. ನಿಪಿ-12 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪಂಚನಾಮೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಪೋಲಿಸರು ನೀಡಿರುವ ನೋಟಿಸನಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ನೋಟಿಸನ್ನು ನಿಪಿ-21 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-21 [ಎ] ಎಂದು ಗುರುತಿಸಲಾಯಿತು. ಆ ನೋಟಿಸಿನ ಪ್ರಕಾರ ಪೋಲಿಸರು ನನ್ನನ್ನು ಐಗಳಿ ಪೋಲಿಸ

ಠಾಣೆಗೆ ಕರೆಸಿದ್ದರು ಎನ್ನುವುದು ಸರಿ. ನಾನು ಪೋಲಿಸ ಠಾಣೆಗೆ ಹೋದಾಗ ಚಾಸಾಃ 5 ಮತ್ತು 1 ನೇ ಆರೋಪಿ ಸಹ ಪೋಲಿಸ ಠಾಣೆಯಲ್ಲಿದ್ದರು ಎನ್ನುವುದು ಸರಿ.

2. 1 ನೇ ಆರೋಪಿ ಜಗಳದ ಸಮಯದಲ್ಲಿ ಉಪಯೋಗಿಸಿದ ಮೋಟರಸೈಕಲನ್ನು ತೋರಿಸಿ ಹಾಜರುಪಡಿಸುತ್ತೇನೆ ಎಂದು ಮತ್ತು ಚಾಸಾಃ 8 ಮತ್ತು ಚಾಸಾಃ 9 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ಆಯುಧಗಳನ್ನು ಹಾಜರುಮಾಡುತ್ತೇನೆ ಎಂದು ಹೇಳಿದ್ದರಿಂದ ಪೋಲಿಸರು 1 ನೇ ಆರೋಪಿಯು ತೋರಿಸಿದ ಸ್ಥಳಕ್ಕೆ ಕರೆದುಕೊಂಡು ಹೋದರು ಎನ್ನುವುದು ಸರಿಯಲ್ಲ.

3. 1 ನೇ ಆರೋಪಿ ನನ್ನನ್ನು, ಪೋಲಿಸರು ಮತ್ತು ಚಾಸಾಃ 4 ಮಂಜುನಾಥ ಅವರನ್ನು ಅವರ ತೋಟಕ್ಕೆ ಕರೆದುಕೊಂಡು ಹೋಗಿ ತೋಟದಲ್ಲಿದ್ದ ಬಾವಿಯ ಬಳಿ ಇರಿಸಿದ್ದ ಕೇಬಲ್ ವಾಯರ್ ಮತ್ತು ಮೋಟರಸೈಕಲನ್ನು ಹಾಜರುಪಡಿಸಿದನು ಎನ್ನುವುದು ಸರಿಯಲ್ಲ. ಅವುಗಳನ್ನು ಪೋಲಿಸರು ನನ್ನ ಸಮಕ್ಷಮ ಜಪ್ತು ಮಾಡಿಕೊಂಡರು ಎನ್ನುವುದು ಸರಿಯಲ್ಲ. ಅಲ್ಲಿಂದ ಮುಂದೆ 1 ನೇ ಆರೋಪಿ ತಮ್ಮ ತೋಟದಲ್ಲಿದ್ದ ದನದ ಕೊಟ್ಟಿಗೆಯ ಹತ್ತಿರ ಕರೆದುಕೊಂಡು ಹೋಗಿ 6 ನೇ ಆರೋಪಿ ಚಾಸಾಃ 9 ರವರಿಗೆ ಹೊಡೆಯಲು ಬಳಸಿದ ಕಬ್ಬಿಣದ ರಾಗೋಲನ್ನು ಹಾಜರುಪಡಿಸಿದನು ಎನ್ನುವುದು ಸರಿಯಲ್ಲ. ಪೋಲಿಸರು ವಸ್ತುಗಳನ್ನು ಪ್ಯಾಕ ಮಾಡಿ ನನ್ನ ಸಮಕ್ಷಮ ಜಪ್ತು ಮಾಡಿಕೊಂಡರು ಎನ್ನುವುದು ಸರಿಯಲ್ಲ. ಮು.ಮಾ.2 ರಿಂದ 4 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ತಮ್ಮ ಸಹಿ ಇದೆ ಎಂದು ಗುರುತಿಸಿದ್ದಾರೆ.

4. ಮು.ಮಾ.1 ರಿಂದ 4 ನ್ನು ಜಪ್ತು ಮಾಡುವ ಸಮಯದಲ್ಲಿ ನಿಪಿ–13 ರಿಂದ ನಿಪಿ–19 ಪೋಟೋಗಳನ್ನು ತೆಗೆಯಲಾಯಿತು ಎನ್ನುವುದು ನನಗೆ ಗೊತ್ತಿಲ್ಲ.

5. ನಿಪಿ–12 ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದ್ದು, ಮು.ಮಾ.1 ರಿಂದ 4 ನ್ನು ನನ್ನ ಸಮಕ್ಷಮ ಜಪ್ತು ಮಾಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಮ್.ಎಸ್.ಪಿ ವಕೀಲರಿಂದ**

ನಿಪಿ –12 ರಲ್ಲಿರುವ ವಿಚಾರಗಳನ್ನು ಪೋಲಿಸರು ನನಗೆ ಓದಿ ಹೇಳಿಲ್ಲ ಎನ್ನುವುದು ಸರಿ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.